ಸದರೀ ದರಖಾಸ್ತುದಾರಳಾದ ಮರಿಯಕಂಮ್ಮನ, ಅರ್ಜೀಯನ್ನು 1884ನೇ ಇಸವೀ ಜನವರೀ ತಿಂಗಳು ತಾರೀಖು 29ರಲ್ಲು ಮೈಸೂರು ವೊಕ್ಕ್ಯಾಂನಲ್ಲಿ ಈ ಕೋರ್ಟಿನಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪ್ಯರೊ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯವಡಿಸಿಯಿದೆ.

1883ನೇ ಇಸವೀ ಡಿಸಂಬರ್ ತಿಂಗಳು 19ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸೀ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ವಿ. ಎಸ್. ನರಸಿಹ್ಮಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜ.

ಶ್ರೀರಂಗಪಟ್ಟಣದ ಮುನಸಿಫ ಆಫೀಸಿನಿಂದ.

ತಾರೀಖು 18ನೇ ಡಿಸಂಬರ್ 1883.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸ್ಯ॥ 1883ನೇ ಇಸವೀ ನವಂಬರ್ 15ನೇ ಮರ್ಕುಂ 953–686ನೇ ನಂಬರ್ ಫೈಂಡ್‌ರಾಕ್ಸ್ ಸಬ್ ಡಿವೀಜ್ ಆಫೀಸರವರ ಹುಕ್ಕುಂ ಸಂಗಡ ತಲಪಿದ ದೀವಾ ಸಾಹೆಬರವರ ಹುಕ್ಕುಂ ಅನುಸರಿಸಿ ಶ್ರೀರಂಗಪಟ್ಟಣದ ಕೊಟೇಯಲ್ಲಿರುವ ವಾರೀಸ್ ಬಂಗ್ಲೇಯಂಬ ಮತ್ತು ಮಹಾರಾಜರವರ ಹಳೇ ಅರಮನೆಯೆಂಬ ಹೆಸರುಳ್ಳ ಕಟ್ಟಡಗಳಲ್ಲಿರತಕ್ಕ ಕೆಲವು ಜೆಲೆವುಳ್ಳ ಚಾಬೀನೆ ಹೆಂಚು ಮುಂತಾದ ಸಾಮಾನುಗಳು, ಸ್ಯ॥ 1884ನೇ ಇಸವೀ ಜನವರೀ 30ನೇ ತಾರೀಖಿನ ದಿವಸ ದಿವಿ 10 ಘಂಟೆಗೆ ಹರಾಜ್ ಮಾಡಿಸಲ್ಪಡುತ್ತೆ. ಆವಶ್ಯಕ ವಿದ್ದಲ್ಲಿ ಆ ತಾರೀಖಿನ ಮಾರನೇ ದಿವಸವು ಹರಾಜು ಮಾಡಿಸಲ್ಪಟ್ಟು, ಜಡ ದರಖಾಸ್ತುದಾರರ ಹೆಸರಿಗೆ ಖಾಯಂ ಮಾಡಲ್ಪಡುತ್ತೆ. ಹರಾಜಿನಲ್ಲಿ ಸದರೀ ಸಾಮಾನುಗಳನ್ನ ತೆಗದುಕೊಳ್ಳಲು ಯಿಚ್ಛೈವುಳ್ಳ ಜನಗಳು ಆ ತಾರೀಖಿಗೆ ಹಾಜರಾಗಬೇಕು.

ಹರಾಜು ನಿಬಂಧನೆಗಳು.

1. ಯಾರ ಚಡ ಸವಾಲ್ ವೈಸ್ ಪ್ರೆಸೀಡೆಂಟರಿಂದ ಅಂಗೀಕರಿಸಲ್ಪಡುತ್ತೋ ಆ ಜನಗಳು ತಾವು ಸವಾಲ್ ಮಾಡಿದ ವೊಬಲಗಿನ ಕೈಕೀ ಸೇಕಡಾ 25 ರೂಪಾಯಿನಂತೆ ಆಗುವಷ್ಟು ವೊಬಲಗನ್ನ ತತ್‌ಕ್ಷಣ ತೇವಣಿ ಹಾಜರ್ಮಾಡಬೇಕು. ಬಾಕೀ ವೊಬಲಗನ್ನು ಹರಾಜು ತಾರೀಖು ಲಾಗಾಯತು 15 ದಿವಸದ ವಳಗಾಗಿ ತಾಲ್ಲೂಕು ಖಜಾನೇಯಲ್ಲಿ ಪಾವತೀ ಮಾಡಬೇಕು.

2. ಹರಾಜು ಪ್ರೆಸೀಡೆಂಟ್ ಸಾಹೆಬರವರ ಮಂಜೂರಾತಿಗೆ ವಳಪಟ್ಟದ್ದಾಗಿರುತ್ತೆ.

3. ಹರಾಜಿನಲ್ಲಿ ತೆಗದುಕೊಳ್ಳಲ್ಪಟ್ಟ ಸಾಮಾನುಗಳು ಹರಾಜುದಾರನ ಸುಫರ್ದು ಮಾಡಲ್ಪಟ್ಟ 30 ದಿವಸಗಳ ವಳಗಾಗಿ ಇರುವ ಸ್ಥಳದಿಂದ ಸಂಪೂರ್ಣವಾಗಿ ಸಾಗಿಸಲ್ಪಡಬೇಕು.

4. ಮೇಲೆ ನಮೂದಿಸಿದ ವಾಯಿದೆ ಗತಿಸಿದ ಮೇಲೆ ಸದರೀ ಸಾಮಾನುಗಳನ್ನ ಸಾಗಿಸದೇ ಇದ್ದ ಸ್ಥಳದಲೇ ಯಿದ್ದಲ್ಲಿ 15 ದಿವಸಗಳ ವರಿಗೂ ದಿನ 1ಕ್ಕೆ 1 ರೂಪಾಯಿನಂತೆ ಹರಾಜುದಾರನು ಮ್ಯುನಸಿಪ್ಯಾಲಿಟಿಗೆ ಜುರ್ಮಾನೆ ಕೊಡುವದಕ್ಕೆ ಗುರಿಯಾಗುತ್ತಾನೆ, ಮತ್ತು 15 ದಿವಸ ಕಳಿದನಂತರ ಹರಾಜುದಾರನು ತೆಗದುಕೊಂಡ ಸಾಮಾನಿನ ಮೇಲು ಖಜಾನೆಗೆ ಅದುವರಿವಿಗೆ ಪಾವತೀ ಮಾಡಿರುವ ವೊಬಲಗಿನ ಮೇಲು ಬಾಧ್ಯತೆಯನ್ನ ಕಳದುಕೊಳ್ಳುತ್ತಾನೆ.

5. ಸದರೀ ಮೇರೆಗೆ ಮಾಯಿದಾ ಅತಿಕ್ರಮಿಸಿದಂಥಾ ಸಾಮಾನುಗಳು ಪುನಹ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ. ಅದರಿದ ಯೀನಾದರೂ ಜಾಸ್ತೀ ಹುಟ್ಟುವಳ್ಳೇ ಅದಲ್ಲಿ ಅದನ್ನ ಮ್ಯುನಸಿಫಲ್ ಬಾಬಿಗೆ ತೀರಿಸಿಕೊಳ್ಳೋಣವಾಗುತ್ತೆ.

6. ಹರಾಜುದಾರನು 1ನೇ ಕಲಂನಲ್ಲಿ ಕಂಡ ಮೇರಿಗೆ ತೇವಣೀ ಹಣವನ್ನು ಮತ್ತು ಬಾಕೀ ವೊಬಲಗನ್ನು ಹಾಜರ್ಮಾಡುವದಕ್ಕೆ ತಪ್ಪಿದ ಪಕ್ಷಕ್ಕೆ ಸಾಮಾನುಗಳು ಪುನಹಾ ಹರಾಜ್ ಮಾಡಿಸಲ್ಪಟ್ಟೀತು. ಆ ಮೇರಿಗೆ ಹರಾಜು ಮಾಡಿಸುವದರ ಲಾಗವಡು ಮತ್ತು ಅದರಿಂದ ಸಂಭವಿಸುವ ನಷ್ಟ ಯಿವುಗಳಿಗೆ ಅವ್ವಲ್ ಹರಾಜುದಾರನ್ನ ಗುರಿಮಾಡಲಾಗೀತು.

ಷ ರಾ ,

ವಾರೀಸ್ ಬಂಗ್ಲೇ ಯಂಬವದೆ ಇನ್ನು ಸಾಬೀತು ಇದೆ, ಅದರ ಸಾಮಾನುಗಳು ಹ್ಯಾಗೆ ಇದೆಯೊ ಅದೇ ಸ್ಥಿತಿಯಲ್ಲೇ ಹರಾಜು ಮಾಡಲ್ಪಡುತ್ತೆ. ಹಳೇ ಅರಮನೆಯ ಸಾಮಾನುಗಳು ಮಾತ್ರ ಕೆಳಗೆ ಇರಿಸಲ್ಪಟಿವೆ ಹರಾಜುದಾರನು ಅವುಗಳನ್ನ ಸಾಗಿಸುವದು ಮಾತ್ರವಾಗಿದೆ.

ರಾಘವೇಂದ್ರರಾವ್,
ವೈಸ್ ಪ್ರೆಸಿಡೆಂಡ್.